**ವ್ಯಾಖ್ಯಾನ**

# <u>ಹೇವವೆಲ್ಲಿದುಹಯ್ಯ ವೈಕುಂಠಪತಿಗೆ</u>

*ಶ್ರೀ ಹರಿವಾಯು ಗುರುಗಳ ಆಶೀರ್ವಾದದಿಂದ ಅರ್ಥ ನಿರೂಪಣೆಯ ಅಲ್ಪ ಪ್ರಯತ್ನ*

👇🏾👇🏾👇🏾👇🏾👇🏾👇🏾👇🏾👇🏾

**ಹೇವವೆಲ್ಲಿದುಹಯ್ಯ ವೈಕುಂಠಪತಿಗೆ || ಪ ||**
**ಮೌನದಿಂ ಭಾರ್ಗವನು ಮಾತೆಯ ಶಿರವ ತರಿದ || ಅಪ ||**

**ಒಬ್ಬ ಮಾವನ ಕೊಂದ, ಒಬ್ಬ ಮಾವನ ಎಸೆದ**
**ಒಬ್ಬ ಮಾವನ ಕೂಡೆ ಕಡಿದಾಡಿದ**
**ಒಬ್ಬ ಭಾವನ ಹಿಡಿದು ಹೆಡೆಮುಡಿಯ ಕಟ್ಟಿದ**
**ಒಬ್ಬ ಮೈದುನಗೆ ಬಂಡಿಯ ಬೋವನಾದ || 1 ||**

**ಕುಂಭಿನಿಗೆ ಪತಿಯಾದ, ಕುಂಭಿನಿಗೆ ಸುತನಾದ**
**ಕುಂಭಿನೀ ಮಗನ ಸಂಹಾರ ಮಾಡ್ದ**
**ಅಂಬುಧಿಗೆ ಪಿತನಾದ, ಅಂಬುಧಿಗೆ ಸುತನಾದ**
**ಅಂಬುಧೀ ಜಾತೆಗೆ ಸ್ವಾಮಿಯಾದ || 2 ||**

**ಬೊಮ್ಮನ ಸಂಹರಿಸಿ ಅವನ ಮಕ್ಕಳನು**
**ಈ ಮಹಿಯೊಳಗೆ ಅವರ ಹತಮಾಡಿದ**
**ರಮ್ಮೆ ವೈಕುಂಠ ಪತಿ ಪುರಂದರ ವಿಠಲ**
**ಬೊಮ್ಮ ಮೂರುತಿಗೇಕೆ ಬಂಧು ಬಳಗ || 3 ||**

ವೈಕುಂಠಪತಿಯಾದ ಶ್ರೀಮನ್ನಾರಾಯಣಮೂರ್ತಿ ಅನಿಮಿತ್ತ ಬಂಧುವಾದ್ದರಿಂದ ಆತನಿಗೆ ಯಾವ ದೋಷವೂ ಇಲ್ಲ ಅನ್ನುವದನ್ನು ಇಲ್ಲಿ ಹೇಳುತ್ತಿದ್ದಾರೆ ನಮ್ಮ ಶ್ರೀ ದಾಸ ರಾಯರು .....

ಅವತಾರಗಳಲ್ಲಿ ಆತನು ಮಾಡಿದ ಯಾವದೇ ಕಾರ್ಯಗಳು ಲೌಕಿಕ ದೃಷ್ಟಿಯಿಂದ ನಮ್ಮಂತಹ ಅಲ್ಪ ಮಾನವರಿಗೆ ಹೇಯವೆನಿಸದರೂ ಸಹಾ ಆತನು ಮಾಡಿದ ಪ್ರತಿಯೊಂದು ಕಾರ್ಯಗಳೂ ಆತನ ಅದ್ಭುತ ಮಹಿಮೆ ಎಂಬುದನ್ನು ಶ್ರೀ ದಾಸರು ಇಲ್ಲಿ ಹೇಳುತ್ತಿದ್ದಾರೆ .....

**ಮೌನದಿಂ ಭಾರ್ಗವನು ಮಾತೆಯ ಶಿರವ ತರಿದ : -** ತನ್ನನ್ನು ಹಡೆದ ತಾಯಿಯಾದ ರೇಣುಕೆಯನ್ನೇ ವಿಚಾರಮಾಡದೇ ಕೊಂದ ಭಾರ್ಗವನಾದ ಇವನಿಗೆ ನಾಚಿಕೆ ಇಲ್ಲವೇ ಇಲ್ಲಾ... ಎನ್ನುವಂತೇ....

***ಒಬ್ಬ ಮಾವನ ಕೊಂದ* =** ಹಿಂಸೆಯೇ ಪ್ರತಿರೂಪನಾದ ಕಂಸನನ್ನು ಶ್ರೀ ಕೃಷ್ಣನಾಗಿ ಕೊಂದವನು, ಸೋದರ ಮಾವನನ್ನೇ ಕೊಂದ ಈತನಿಗೆ ನಾಚಿಕೆ ಎಲ್ಲಿದೆ ಅಲ್ವಾ ?  ಹೀಗೆ ಬಂಧುಗಳನ್ನೇ ಕೊಂದ ನಾಚಿಕೆಗೇಡಿ ಈತನು .... ನಮ್ಮ ಶ್ರೀಹರಿ, ಅಂತಾರೆ ಶ್ರೀ ದಾಸಾರ್ಯರು .....

***ಒಬ್ಬ ಮಾವನ ಎಸೆದ* =** ಶ್ರೀ ರಾಮಚಂದ್ರ ದೇವರು ಸಮುದ್ರಕ್ಕೆ ಸೇತುವೆ ನಿರ್ಮಿಸಲು ಮೂರು ದಿವಸ ಸಮುದ್ರ ದಂಡೆಯ ಮೇಲೆ ಮಲಗಿದನು.  ಸಮುದ್ರ ರಾಜನಾದರೂ ಸಹಕರಿಸಲಿಲ್ಲ, ಕೋಪಗೊಂಡ ಶ್ರೀ ರಾಮ ದೇವರು ಬಾಣವನ್ನು ಹೂಡಿ ಸಮುದ್ರದ ನೀರನ್ನೇ ಒಣಗಿಸಿ ದೂರ ಸರಿಸಿದನು.  ಇದೇ ಸಮುದ್ರ ರಾಜನು ತನ್ನಲ್ಲಿ ಪ್ರಾದುರ್ಭವಿಸಿದ ಲಕ್ಷ್ಮೀ ದೇವಿಯರನ್ನು ಶ್ರೀ ನಾರಾಯಣನಿಗೆ ವಿವಾಹ ಮಾಡಿಕೊಟ್ಟಿದ್ದರಿಂದ ಹೆಣ್ಣುಕೊಟ್ಟ ಮಾವನಾಗಿರುವನು.  ಈ ಮಾವನನ್ನೇ ದೂರ ಎಸೆದವನು ನಮ್ಮ ಪರಮಾತ್ಮನು ಅಂತಾರೆ...

***ಒಬ್ಬ ಮಾವನ ಕೂಡೆ ಕಡಿದಾದಡಿದ*--** ಜಾಂಬವತಿಯನ್ನು ಜಾಂಬವಂತನು ಶ್ರೀ ಕೃಷ್ಣನಿಗೆ ಪರಿಣಯಮಾಡಿಕೊಟ್ಟಿದ್ದರಿಂದ ಜಾಂಬವಂತ ಶ್ರೀ ಕೃಷ್ಣನಿಗೆ ಮಾವನಾದನು.  ಶ್ಯಮಂತಕ ಮಣಿಗಾಗಿ ಬಂದ ಶ್ರೀ ಕಷ್ಣನು ಜಾಂಬವಂತನ ಜೊತೆ ಇಪ್ಪತ್ತೆಂಟುದಿನಗಳ ಕಾಲ ಯುದ್ದ ಮಾಡಿದ.  ಇದನ್ನೇ ತನ್ನ ಮಾವನ ಜೋಡಿ ಕಡಿದಾಡಿದನು ಅಂತಾರೆ ಶ್ರೀಮತ್ಪುರಂದರ ದಾಸಾರ್ಯರು..

***ಒಬ್ಬ ಭಾವನ ಹಿಡಿದು ಹೆಡೆಮುರಿಯ ಕಟ್ಟಿದ*---** ಕುಂಡಿನ ಪುರದ ರಾಜ ಭೀಷ್ಮಕನ ಮಗ ರುಕ್ಮಿ. ಅವನ ಸಹೋದರಿಯೇ ರುಕ್ಮಿಣೀ ದೇವಿಯರು.  ಶ್ರೀ ಕೃಷ್ಣ ಪರಮಾತ್ಮನನ್ನು ವರಿಸಿದಳು.  ರಾಕ್ಷಸ ವಿವಾಹ ವಿಧಿಯಿಂದ ಅಪಹರಿಸಿ ಮದುವೆಯಾದನು ನಮ್ಮ ಪರಮಾತ್ಮ.... ರುಕ್ಮಿಣೀ ದೇವಿಯರನ್ನು ಕುಂಡಿನ ಪುರಕ್ಕೆ ಮರಳಿ ಕರೆತರದೇ ಪುರ ಪ್ರವೇಶ ಮಾಡಲಾರೆ ಎಂದು ಪ್ರತಿಜ್ಞೆಗೈದು ರುಕ್ಮಿಯು ಯುದ್ದಕ್ಕೆ ಹೊರಟಿದ್ದನು...  ಶ್ರೀ ಕೃಷ್ಣನು ಈ ಹೆಂಡತಿಯ ಅಣ್ಣನಾದ್ದರಿಂದ ಭಾವನೆನಿಸಿದ ರುಕ್ಮಿಯನ್ನು ಸೋಲಿಸಿ ಐದು ಶಿಖೆಗಳನ್ನು ಬಿಟ್ಟು ಮುಂಡನ ಮಾಡಿಸಿ ಕಳುಹಿಸಿದ್ದರಿಂದ *ಒಬ್ಬ ಭಾವನ ಹಿಡಿದು ಹೆಡೆಮುರಿಯ ಕಟ್ಟಿದ* ಅಂದಿದ್ದಾರೇ ಶ್ರೀಮತ್ಪುರಂದರ ದಾಸಾರ್ಯರು.......

***ಒಬ್ಬ ಮೈದುನನಿಗೆ ಬಂಡಿಯ ಬೋವನಾದ*--** ಶ್ರೀ ಕೃಷ್ಣ ಪರಮಾತ್ಮನು ತನ್ನ ತಂಗಿಯಾದ ಸುಭದ್ರೆಯನ್ನು ಅರ್ಜುನನಿಗೆ ವಿವಾಹ ಮಾಡಿ ಕೊಟ್ಟಿದ್ದರಿಂದ ಅರ್ಜುನನು ಕೃಷ್ಣ ಪರಮಾತ್ಮನಿಗೆ ಭಾವ ಮೈದುನನಾದನು. ಈ ಮೈದುನನಿಗೆ ಮಹಾಭಾರತ ಯುದ್ಧದಲ್ಲಿ ಸಹಾಯ ಮಾಡುವ ನಿಮಿತ್ತ ರಥದ ಸಾರಥ್ಯವನ್ನು ವಹಿಸಿದ್ದನ್ನೇ - *ಒಬ್ಬ ಮೈದುನನಿಗೆ ಬಂಡಿಯ ಬೋವನಾದ*, ಬೋವ ಅಂದರೇ ಸಾರಥಿ.. ಹೀಗಾಗಿ ಸಾರಥಿಯಾದ ಎಂದಿದ್ದಾರೆ...

***ಕುಂಭಿಣಿಗೆ ಪತಿಯಾದ*--** ಕುಂಭಿಣಿ ಎಂದರೆ ಭೂಮಿ. ವರಾಹಾವತಾರದಲ್ಲಿ ಭೂಮಿಯನ್ನು ತನ್ನ ಎಡದ ತೊಡೆಯಲ್ಲಿ ಕೂಡಿಸಿಕೊಂಡು ಪತ್ನಿಯಾಗಿ ಸ್ವೀಕರಿಸಿದನು .... ಹೀಗಾಗಿ ಕುಂಭಿಣಿಯ ಪತಿಯಾದ ಅಂತಾರೆ.....

***ಕುಂಭಿನಿಗೆ ಸುತನಾದ* -** ಕುಂಭಿನಿಗೆ ಪತಿಯಾದವನು ಪುನಃ ಕುಂಭಿನಿಗೆ ಸುತನಾಗುವದು ಅಂದರೇ ಇಲ್ಲಿ - ಕುಂಭಿನಿ ಅಂದರೇ ಯಶೋದಾ ದೇವಿಯರು. ಯಾಕೆ ಅಂದರೆ ನಂದಗೋಪನು ಕುಂಭದಲ್ಲಿಡಬಹುದಾದ ಹಾಲು, ಮೊಸರು, ಮುಂತಾದ ವಸ್ತುಗಳನ್ನು ಮಾರಿ ಜೀವಿಸುತ್ತಿದ್ದ ಗೋಪರ ಒಡೆಯನಾದ್ದರಿಂದ ನಂದಗೋಪನಿಗೆ *ಕುಂಭಿ* ಎಂದು ಕರೆಯುವರು. ಆ ಕುಂಭಿಯ ಪತ್ನಿ ಯಶೋದಾ ದೇವಿಯರು ಕಡಿಂದ *ಕುಂಭಿನಿ* ಎನಿಸಿಕೊಳ್ಳುವಳು . ಈ ಕುಂಭಿನಿಯಾದ ಯಶೋದಾ ದೇವಿಯರಿಗೆ ಶ್ರೀ ಕೃಷ್ಣ ಪರಮಾತ್ಮ ಮಗನಾದ್ದರಿಂದ *ಕುಂಭಿನಿಗೆ ಸುತನಾದ* ಅಂದಿದ್ದಾರೆ. ಅಲ್ಲದೇ ಯಶೋದಾದೇವಿಯರ ಮೂಲ ರೂಪದ ಹೆಸರು *ಧರಾ* ಅಂತ .. ಹೀಗಾಗಿ ಕುಂಭಿನಿಗೆ ಸುತನಾದ ಧರಾಸುತ ಅಂತನೂ ಅರ್ಥ ಬರುತ್ತದೆ....

***ಕುಂಭಿನೀ ಮಗನ ಸಂಹಾರ ಮಾಡಿದ*-** ಕುಂಭಿನಿ ಎಂದರೆ ಭೂದೇವಿಯರು. ಭೂದೇವಿಯ ಮಗ ನರಕಾಸುರ. ಈ ನರಕಾಸುರನನ್ನು ಸಂಹಾರ ಮಾಡಿದ್ದರಿಂದ ಈ ಮಾತು ಹೇಳಿದ್ದಾರೆ ...

ಅಥವಾ ಇನ್ನೊಂದು ರೀತಿ ನೋಡಿದರೇ ವಸುದೇವನ ತಂಗಿ ಶೃತಶ್ರವೆ ಇವಳಿಗೂ ಕುಂಭಿನಿ ಎನ್ನುವ ಹೆಸರಿನಿಂದ ಕರೆಯುತ್ತಿದ್ದರು, ಇವಳ ಪತಿ ದಮಘೋಷ (ಚೇದಿರಾಜ) ಇವರಿಬ್ಬರ ಪುತ್ರನೇ ಶಿಶುಪಾಲ, ಈ ಶಿಶುಪಾಲನನ್ನು ರಾಜಸೂಯ ಯಾಗದ ಸಂದರ್ಭದಲ್ಲಿ ಶ್ರೀ ಕೃಷ್ಣ ಪರಮಾತ್ಮ ಕೊಂದಿದ್ದರಿಂದ ಈ ಮಾತು ಹೇಳಿದ್ದಾರೆ ಎಂದು ಸಹಾ ತಿಳಿಯ ಬಹುದು

***ಅಂಬುಧಿಗೆ ಪಿತನಾದ*-** ಗಂಗಾ ನದೀ ಜನಕ ಅಂತ ಅರ್ಥ. ತ್ರಿವಿಕ್ರಮ ದೇವರ ಪಾದದಿಂದ ಜನಿಸಿದ ಗಂಗಾ ದೇವಿಯರು ಭಗವಂತನ ಪುತ್ರಿ ಎನಿಸಿದ್ದಾರೆ....

***ಅಂಬುಧಿಗೆ ಸುತನಾದ* -** ಮತ್ಸ್ಯ ರೂಪ ಧರಿಸಿ *ಕೃತಮಾಲಾ* ನದಿಯಲ್ಲಿ ಸತ್ಯವೃತನಿಗಾಗಿ ಕಾಣಿಸಿಕೊಂಡಂತಹಾ ಮತ್ಸ್ಯರೂಪಿ ಪರಮಾತ್ಮನನ್ನೇ ಇಲ್ಲಿ ಅಂಬುಧಿಯ ಸುತ ಎನ್ನಲಾಗಿದೆ ...

***ಅಂಬುಧಿ ಜಾತೆಗೆ ಸ್ವಾಮಿಯಾದ* -** ಅಂಬುಧಿ ಅಂದರೇ ಸಮುದ್ರ.. ಸಮುದ್ರದಲ್ಲಿ ಜನಿಸಿದವರು ಶ್ರೀ ಲಕ್ಷ್ಮೀ ದೇವಿಯರು, ಲಕ್ಷ್ಮೀ ದೇವಿಯರನ್ನು ವಿವಾಹವಾಗಿ ಸ್ವಾಮಿಯೆನಿಸಿದನು ನಮ್ಮ ಪರಮಾತ್ಮ.....

***ಬೊಮ್ಮನ ಸಂಹರಿಸಿ ಅವನ ಮಕ್ಕಳನು***
***ಈ ಮಹಿಯೊಳಗವರ ಹತಮಾಡಿದ***

ಪ್ರಳಯ ಕಾಲದಲ್ಲಿ ಬ್ರಹ್ಮನನ್ನು ಪರಮಾತ್ಮನು ನುಂಗುವನು ಆದ್ದರಿಂದ ಬ್ರಹ್ಮನ ಸಂಹರಿಸಿ ಅಂದಿದ್ದಾರೆ.

ಸೃಷ್ಟಿ ಕಾಲದಲ್ಲಿ ಬ್ರಹ್ಮ ದೇವರ ಮಕ್ಕಳಾದ ಮರೀಚಿ ಋಷಿಗಳ ಪುತ್ರರಾದ ಕಶ್ಯಪರ ಪತ್ನಿ ದಿತಿಯ ಮಕ್ಕಳೇ ದೈತ್ಯರು. ಈ ದೈತ್ಯರು ಬ್ರಹ್ಮದೇವರಿಂದ ಅವಧ್ಯತ್ವವನ್ನು ಪಡೆದಿದ್ದರೂ ಸಹಾ ಅನೇಕ ಅವತಾರಗಳನ್ನು ಮಾಡಿ ಬ್ರಹ್ಮ ದೇವರ ವರಕ್ಕೆ ಧಕ್ಕೆ ಬಾರದಂತೆ ಸಂಹರಿಸಿದ್ದಾನೆ ನಮ್ಮ ಪರಮಾತ್ಮ....

ಈ ರೀತಿಯಾಗಿ ಅನೇಕ ಅವತಾರಗಳನ್ನು ಎತ್ತಿ ದುಷ್ಟರನ್ನು ಶಿಕ್ಷಿಸಿ ಶಿಷ್ಟರನ್ನು ರಕ್ಷಿಸಿದ **ರಮಾಪತಿಯಾದ ಈ ವೈಕುಂಠಪತಿಗೆ**, ಬ್ರಹ್ಮ ದೇವರು, ವಾಯು ದೇವರು, ರುದ್ರ ದೇವರು, ಹೀಗೆ ಬಂಧು ಬಳಗದ ಅವಶ್ಯಕತೆ ಇದೆಯೇ? ಸರ್ವಥಾ ಇಲ್ಲ. ಎಲ್ಲರಲ್ಲೂ ನಿಂತು ಆಯಾ ಹೆಸರಿನಿಂದಲೇ ಕರೆಸಿಕೊಂಡು ಸರ್ವ ಪ್ರೇರಕನಾದ, ಸರ್ವ ಶಕ್ತನಾದ, ಸರ್ವತಂತ್ರ ಸ್ವತಂತ್ರನಾದ ನಮ್ಮ ಶ್ರೀ ಮನ್ನಾರಾಯಣನಿಗೆ ಈ ಬಂಧು ಬಳಗ ಯಾಕೆ ಬೇಕು ಅಲ್ವಾ? ಭಕ್ತರಿಗೆ ಒಲಿದು ಭಕ್ತರ ಹೃದಯದಲ್ಲಿ ನೆಲೆಗೊಳ್ಳುವ ನಮ್ಮ ಶ್ರೀ ನಾರಯಣನಿಗೆ ಯಾವ ಬಂಧು ಬಳಗದ ಅವಶ್ಯಕತೆಯೂ ಇಲ್ಲವೇ ಇಲ್ಲ ಎನ್ನುವದನ್ನು ಶ್ರೀಮತ್ಪುರಂದರದಾಸಾರ್ಯರು ಇಲ್ಲಿ ನಮ್ಮ ಕಲ್ಪನೆಗೂ ನಿಲುಕದಂತೆ ಅತ್ಯದ್ಭುತ ಮಹಿಮೆಗಳನ್ನು ವರ್ಣಿಸುವದೊರಂದಿಗೆ ಶ್ರೀ ಹರಿಯು ಅನಿಮಿತ್ತ ಬಾಂಧವ ಎಂಬುದನ್ನು ನಿರೂಪಿಸಿದ್ದಾರೆ......

ಇಂಥಹಾ ಅದ್ಭುತವಾದ ಮುಂಡಿಗೆಗಳ, ಪದಗಳ ಮುಖಾಂತರ ಶ್ರೀ ಹರಿಯ ಶ್ರೇಷ್ಠ ಗುಣಗಾನವನ್ನು ಮಾಡುತ್ತಾ ನಮ್ಮೆಲ್ಲರಿಂದ ಮಾಡಿಸುವಂಥಹಾ ಶ್ರೀ ಮತ್ಪುರಂದರ ದಾಸಾರ್ಯರಿಗೂ ಹಾಗೂ ಎಲ್ಲಾ ಶ್ರೇಷ್ಠ ಹರಿದಾಸರಿಗೂ ಅನಂತಾನಂತ ನಮಸ್ಕಾರಗಳು ಅವರ ಪಾದ ಪದ್ಮಗಳಿಗೆ ಅರ್ಪಿಸುತ್ತಾ....

**ಅಸ್ಮದ್ ಪತ್ಯಂತರ್ಗತ ಭಾರತೀ ರಮಣ ಮುಖ್ಯಪ್ರಾಣಾಂತರ್ಗತ ಲಕ್ಷ್ಮೀ ನಾರಸಿಂಹಾಭಿನ್ನ ಶ್ರೀ ಧನ್ವಂತರೀರೂಪೀ ಪರಮಾತ್ಮನಿಗೆ ಸಮರ್ಪಣೆ ಮಾಡುತ್ತಾ...**

ಜೈ ವಿಜಯರಾಯ

**ಲೇಖಕರು:** ಶ್ರೀಮತಿ ಪದ್ಮ ಶಿರೀಷ ಬೊಜ್ಜಿ, ಮೈಸೂರು.

ನಾದನೀರಾಜನದಿಂ ದಾಸಸುರಭಿ 🙏